Reg. No. | | | | | | | | | |

# BSCKAL 253/FNDKAL 253/HRDKAL 253

## Credit Based IV Semester B.Sc./B.Sc. (FND)/B.A. (HRD) Degree Examination, April/May 2018
## (Common to all Batches)
## ಕನ್ನಡ ಭಾಷೆ

Time : 3 Hours Max. Marks : 80

### ಭಾಗ – 1
### ಕಾವ್ಯ

I. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಉಷಾ ಮತ್ತು ಅನಿರುದ್ಧರ ಸಮಾಗಮದ ಸ್ವಾರಸ್ಯವನ್ನು ಕನಕದಾಸರ ಕಾವ್ಯದ ಹಿನ್ನೆಲೆಯಲ್ಲಿ ವಿವರಿಸಿರಿ.

2) ಸುಪ್ರತೀಕ ಗಜದ ಪರಾಕ್ರಮ ಹಾಗೂ ಅರ್ಜುನನು ಅದನ್ನು ನಿಗ್ರಹಿಸಿದ ಬಗೆಯನ್ನು ಕುಮಾರವ್ಯಾಸನ ಕಾವ್ಯಭಾಗದ ಹಿನ್ನೆಲೆಯಲ್ಲಿ ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ : **(1×5=5)**

1) ಗಾರ್ಮೆಂಟ್ ಹುಡುಗಿಯ ಬದುಕಿನ ಬವಣೆಯು ಕವನದಲ್ಲಿ ಹೇಗೆ ನಿರೂಪಿತವಾಗಿದೆ ?

2) 'ಕಪ್ಪು ಜನತೆಯ ಸೂರ್ಯನಿಗೆ' ಕವನದಲ್ಲಿ ಚಿತ್ರಿತವಾದ ಅಂಬೇಡ್ಕರ್‌ರವರ ವ್ಯಕ್ತಿತ್ವವನ್ನು ವಿಶ್ಲೇಷಿಸಿರಿ.

ಇ) ಒಂದರ ಕುರಿತು ಟಿಪ್ಪಣಿ ಬರೆಯಿರಿ : **(1×3=3)**

1) ಚಿತ್ರಲೇಖೆ 2) ಶಿಶುನಾಳ ಶರೀಫ

II. ಅ) ಒಂದು ಪದ್ಯದ ಸಂದರ್ಭ ಸೂಚಿಸಿ, ಕಾವ್ಯ ಸಂದರ್ಭದಲ್ಲಿ ಅದರ ಮಹತ್ವ ವಿವೇಚಿಸಿರಿ. **(1×4=4)**

1) ಬಲು ಬಿಸಿಲೊಳುರೆ ನೊಂದ ನೈದಿಲೆ
ಗಳಿಗೆ ಚಂದ್ರಿಕೆ ದೈತ್ಯರುರು ಬೆಗೆ
ಸಿಲುಕಿದಮರರಿಗಸುರ ಹರನ ಕಟಾಕ್ಷ ವಿಕ್ಷೇಪ
ಬಲಿದ ತಾಪತ್ರಯದ ಭವಗೋ
ಟಲೆಯ ಜೀವಿಗೆ ಸುಪ್ರಬೋಧದ
ಸುಳುವಿನಂತಿರೆ ಪಾರ್ಥ ಮೈದೋರಿದನು
ನಿಜಬಲಕೆ ||

2) ಸೊದೆಯನೀಂಟುವ ರಾಜಹಂಸದ ಮರಿಗೆ ಮೇಣ್
ನಿಧಿಯ ತೋರಿದಡೆ ಪೀರ್ದಪುದೆ
ಎರ್ದೆಗಿಚ್ಚನಿಕ್ಕಿ ಪೋದಾತನಲ್ಲದೆ ಮಿಕ್ಕ
ಸದೆಗರ ತಂದಡೊಪ್ಪುವನೆ ||

P.T.O.

(2×3=6)

ಆ) ಎರಡು ಸಾಲುಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.

1) ತಂದೆಯೆ ! ಮಮಾತ್ಮವಂ ನಿನ್ನ ಕೈಗೊಪ್ಪಿಸುವೆ.

2) ಜಾತಿ-ಮತ-ಭಾಷೆ ಬಣ್ಣಗಳ ಗೋಡೆಯ ನಡುವೆ ನರಳುವ ಪಾಡು ತಪ್ಪೀತು ಹೇಗೆ ?

3) ಮಿಗೆ ತಿಮಿಂಗಿಲನೊಡನೆ ಹುಲು ಮೀನುಗಳು ಮಾಡುವದೇನು ?

(4×1=4)

III. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿರಿ :

1) ಬಲರಾಮನ ಆಯುಧ ಯಾವುದು ?

2) ಕನಕದಾಸರ ಮೋಹನತರಂಗಿಣಿಯು ಯಾವ ಛಂದಸ್ಸಿನಲ್ಲಿದೆ ?

3) ಭಗದತ್ತನು ಯಾರ ಮಗ ?

4) ಚಿತ್ರಲೇಖೆಗೆ ಆಕಾಶಗಮನ ವಿದ್ಯೆಯನ್ನು ಕಲಿಸಿದ ಗುರು ಯಾರು ?

## ಭಾಗ – 2

## ಗದ್ಯ

(1×8=8)

IV. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ :

1) ಮಾನವ ಪ್ರೀತಿಯಿಂದ ಮಾತ್ರ ಮನುಷ್ಯರನ್ನು ಗೆಲ್ಲಲು ಸಾಧ್ಯ – ಬುದ್ಧನ ಕುರಿತ ಲಂಕೇಶರ ಲೇಖನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿರಿ.

2) 'ರಾಷ್ಟ್ರಧ್ವಜದಲ್ಲಿ ಬಿಟಿ ಹತ್ತಿ, ಹುಲ್ಲೆಸಳಲ್ಲಿ ಪ್ಲಾಸ್ಟಿಕ್ ಕ್ರಾಂತಿ' ಲೇಖನದ ಆಶಯವನ್ನು ವಿಶದಪಡಿಸಿರಿ.

(1×5=5)

ಆ) **ಒಂದು** ಪ್ರಶ್ನೆಗೆ ಉತ್ತರಿಸಿರಿ :

1) ದೋಸೆ ತಯಾರಿಸುವಲ್ಲಿ ಅಡಗಿರುವ ವೈಜ್ಞಾನಿಕ ತತ್ವಗಳಾವುವು ?

2) 'ಮಾತಿನ ಮಲ್ಲಿ' ಪ್ರಬಂಧದಲ್ಲಿ ಮೂಡಿಬಂದ ಕೌಟುಂಬಿಕ ಸಾಮರಸ್ಯದ ಚಿತ್ರಣ ನೀಡಿರಿ.

(1×3=3)

ಇ) **ಒಂದರ** ಕುರಿತು ಟಿಪ್ಪಣಿ ಬರೆಯಿರಿ :

1) ಮಹಿಳಾ ಮೀಸಲಾತಿ

2) ನಾಗೇಶ ಹೆಗಡೆ.

(4×1=4)

V. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿರಿ :

1) ಪಿ. ಲಂಕೇಶರ ಆತ್ಮಕಥನದ ಹೆಸರೇನು ?

2) ಹಾ. ಮಾ. ನಾಯಕರ ಪೂರ್ಣ ಹೆಸರೇನು ?

3) ದೋಸೆ ಮತ್ತು ವಿಜ್ಞಾನ ಪ್ರಬಂಧದ ಲೇಖಕರು ಯಾರು ?

4) ಗೌತಮನ ಸೇವಕನ ಹೆಸರೇನು ?

## ಭಾಗ – 3
## ಕ್ರಿಯಾತ್ಮಕ ಕನ್ನಡ

VI. ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ : (2×4=8)

1) ಬ್ಲಾಗುಗಳ ಸ್ವರೂಪವನ್ನು ವಿವರಿಸಿರಿ.

2) ದೂರದರ್ಶನ ಬೆಳೆದು ಬಂದ ಹಾದಿಯನ್ನು ವಿವರಿಸಿರಿ.

3) ಅಂತರ್ಜಾಲದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

VII. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ವಿಜ್ಞಾನ ಬರವಣಿಗೆ – ಲೇಖನವನ್ನು ಬರೆದವರು ಯಾರು ?

2) ಆಕಾಶವಾಣಿಯ ಸಂಶೋಧಕನೆಂದು ಯಾರನ್ನು ಕರೆಯುತ್ತಾರೆ ?

## ಭಾಗ – 4
## ಮಹಾಕಾವ್ಯ

VIII. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ : (1×8=8)

1) ರಾಮಾಯಣದಲ್ಲಿ ಅನಾದರಕ್ಕೆ ಗುರಿಯಾದ ಊರ್ಮಿಳೆಯನ್ನು ಕುವೆಂಪು ತಮ್ಮ ಕಾವ್ಯದಲ್ಲಿ ವಿಶಿಷ್ಟವಾಗಿ ಚಿತ್ರಿಸಿದ ಬಗೆಯನ್ನು ವಿವರಿಸಿರಿ.

2) ರಾಮಚಂದ್ರನು ವನವಾಸಕ್ಕೆ ತೆರಳುವ ಸನ್ನಿವೇಶವನ್ನು ವಿವರಿಸಿರಿ.

ಆ) ಎರಡರ ಕುರಿತು ಟಿಪ್ಪಣಿ ಬರೆಯಿರಿ : (2×4=8)

1) ಗುಹ

2) ಕುಪಿತ ಲಕ್ಷ್ಮಣನ ಮಾತುಗಳು

3) ಕೌಸಲ್ಯೆ.

IX. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) ಸುಮಿತ್ರಾತ್ಮಜ ಎಂದರೆ ಯಾರು ?

2) 'ಮನೆಯೆನಗೆ ರಮಣನಿರ್ದೆಯಲ್ಲದೆಯೆ ಮಾವನರಮನೆಯಲ್ತು' ಈ ಮಾತನ್ನು ಹೇಳಿದವರು ಯಾರು ?

3) ಕುವೆಂಪುರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ ?

4) ಊರ್ಮಿಳೆ ಯಾವ ನದಿಯ ತಟದಲ್ಲಿ ಪರ್ಣಕುಟಿಯನ್ನು ನಿರ್ಮಿಸಿಕೊಂಡಳು ?

---